ತಾರೀಖು 24ನೇ ಅಕ್ಟೋಬರ್ 1884.

ಕ್ರೋಸ್‌ಪೇಟೆ ಮತ್ತು ಹೊಸಕೋಟೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ದೇವಾರಸಾಗಿ ಯಿರತಕ್ಕ ಈ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನು ಹಾಜರ್ ಮಾಡಿದವರೆ ಆಗಲಿ ಅಥವಾ ವಾಪಸ್‌ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರಹೊಂದಿದ ಮುತಾಲೀಕರಾಗಲಿ ಈ ನೋಟೀಸ್ ತಾರೀಖು ಲಾಗಾಯತು ಬಂದು ತಿಂಗಳ ಒಳಗಾಗಿ ಡಿಟೋ ಸಬ್ ರಿಜಿಸ್ಟ್ರಾರ್ ಆಫೀಸಿಗಳಲ್ಲಿ ಹಾಜರಾಗಿ ವಾಪಸ್ ತೆಗದು ಕೊಳ್ಳಿಬೇಕು, ತಪ್ಪಿದರೆ ಸ್ ೧೮೭೭ನೇ ಇಸವಿ 3ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ನಾಶಮಾಡಲ್ಪಡುತ್ತೆ:—

ತಾಲ್ಲೂಕು ಹೆಸರು.	ದಸ್ತಾವೇಜು ನಂಬರ್.	ದಸ್ತಾವೇಜು ಹಾಜರಾದ ತಾರೀಖು.	ರಿಜಿಸ್ಟ್ರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಿಯಾದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರದುಕೊಂಡವರ ಹೆಸರು, ವಾಸಸ್ಥಳ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಕ್ರೋಸ್‌ಪೇಟೆ ತಾಲ್ಲೂಕು.	35 / 82—83	24 6 82	29 6 82	29 6 82	ಕ್ರೋಸ್‌ಪೇಟೆ ಕಸಬಾ ಬಸ್ತಿಯಲ್ಲಿರುವ ಅಗಬರ್‌ಸಾಬರ ಮಮ್ಮದ್‌ಸಾಬರ ಮಗ ಮಹಮ್ಮದ್ ಹಿಸಿಹಾಕ್‌ಸಾಬ್	ಕ್ರೋಸ್‌ಪೇಟೆ ಕಸಬಾ ಬಸ್ತಿಯಲ್ಲಿರುವ ಸೈಯದ್ ದಾವೂದ್‌ಸಾಬರ ಮಗ ಸೈಯದ್‌ಅಹಮ್ಮದ್‌ಸಾಬ್.	ಬಿಟ್ಟಿಹಳ್ಳಿ ಗ್ರಾಮದ 51ನೇ ನಂಬರ್ ಬಾಗಾಯಿತು ಜಮ್ಮಿ 130 ರೂಪಾಯಿಗಳಿಗೆ ಕ್ರಯಮಾಡಿ ಇರುವದಾಗಿ.
ಹೊಸಕೋಟೆ ತಾಲ್ಲೂಕು.	96 / 82—83	17 8 82	17 8 82	17 8 82	ಹೊಸಕೋಟೆ ತಾಲ್ಲೂಕು ನಂದಗುಡಿ ನಾಗಪ್ಪನವರ ಮಗ ವೆಂಕಟಕೃಷ್ಣಪ್ಪ.	ಕೋರಟಿಗೆರೆ ತಾಲ್ಲೂಕು ಹೊಳವನಹಳ್ಳಿ ಶೇಷಾಚಾರ್	ನಂದಗುಡಿ ಹೋಬಳಿ ಅಗ್ರಹಾರದ ವಡಹಳ್ಳಿ ಗ್ರಾಮದಲ್ಲಿ ತನ್ನ ಹಿಸ್ಸೆ ಗ್ರಾಮವನ್ನು 500 ರೂಪಾಯಿಗಳಿಗೆ ಕ್ರಯಮಾಡಿ ಇರುವದಾಗಿ.

ಇ. ಸಿ. ಷಣ್ಮುಗವೇಲುಪಿಳ್ಳೈ,
ಫಾರ್ ರಿಜಿಸ್ಟ್ರಾರ್.

ತುಮಕೂರು ಡಿಸ್ಟ್ರಿಕ್ಟ್.

ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಸಾಹೇಬರವರ ಆಫೀಸಿನಿಂದ.

ಇಸ್ತಿಹಾರ್ ನಾಮೆ.

ತಾರೀಖು 16ನೇ ಅಕ್ಟೋಬರ್ 1884.

ಸ್ ೧೮೮೪ನೇ ಇಸವಿ ನವೆಂಬರ್ ಗುರ್ರೇ ಲಾಗಾಯತು ಸ್ ೧೮೮೫ನೇ ಇಸವಿ ಅಕ್ಟೋಬರ್ 31ನೇ ತಾರೀಖು ವರೆಗೆ ಬಂದು ಸಾಲ್ ವರಿಗೆ ದೇವರಾಯದುರ್ಗದ ಫಾರೆಸ್ಟಿನಿಂದ ತುಮಕೂರು ರೈಲ್ವೇ ಸ್ಟೇಷನಿಗೆ (ಫಾಸಲೆ 8ರ ಲಾಗಾಯತು 12 ಮೈಲ್) ಮಾಹೆಯಾನಾ 200ಟ್ಸ್ ಅಥವಾ ಜಾಸ್ತಿ ಸಾದೆ ಸರಬರಾಯಿ ಮಾಡುವ ಬಗ್ಗೆ ಸ್ ಮಜಕೂರ್ ನವಂಬರ್ 15ನೇ ತಾರೀಖು ವರೆಗೆ ಈ ಆಫೀಸಿನಿಂದ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ತೆಗಿಯಲ್ಪಡುವವು.

2. ಕಂಟ್ರಾಕ್ಟದಾರನು ಪ್ರತಿತಿಂಗಳ ಗುರ್ರೇ ತಾರೀಖಿಗೆ ಮೇಲೆ ನಮೂದಿಸಿದ ಮೊತ್ತದ ಸಾದೆಯನ್ನ ತುಮಕೂರು ಸ್ಟೇಷನ್‌ಬಳಿ ಕೊಡಬೇಕು. ಈರೀತಿ ನಡಿಸತಕ್ಕ ಬಗ್ಗೆ ಕಂಟ್ರಾಕ್ಟದಾರನು ಮೊಂದು ತಿಂಗಳಿಗೆ ಸಪ್ಲೈಮಾಡಬೇಕಾದ ಸಾದೆಯನ್ನ ಮುಂಚಿತವಾಗಿ ಸ್ಟೇಷನ್‌ಬಳಿ ಜಮಾಯಿಸಿಕೊಂಡಿರಬಹುದು.

3. ಗಿಡಗಳು ಕತ್ತಾಯಿಸತಕ್ಕ ವಿಧ ಮತ್ತು ಸಾದೆ ಕತ್ತಾಯಿಸುವ ಜಾಗ ಸಹ ಫಾರೆಸ್ಟು ಇಲಾಖೆಯವರಿಂದ ಗೊತ್ತು ಮಾಡಲ್ಪಡುತ್ತೆ.

4. ಕಂಟ್ರಾಕ್ಟಿನ ಷರತ್ತುಗಳ ಡೇಖೀಲ್ ಹೆಚ್ಚಿಗೆ ತಪಸೀಲ್‌ಗಳು ಈ ಆಫೀಸಿನಿಂದ ಮೊಖ್ತಾ ಆಗಲಿ ಅಥವಾ ಅರ್ಜೀ ಮೂಲಕವೇ ಆಗಲಿ ತಿಳಿದುಕೊಳ್ಳಬಹುದು.

5. ತುಮಕೂರು ಸ್ಟೇಷನಿಗೆ ಸಾದೆಯು ಯಾವ ಕಮ್ಮಿ ದರಕ್ಕೆ ಕಂಟ್ರಾಕ್ಟದಾರು ಸರಬರಾಯಿ ಮೊಡಲು ಒಪ್ಪುತ್ತಾರೋ ಆಂಥಾ ಕಮ್ಮಿ ದರವನ್ನ ಪ್ರತಿ ದರಖಾಸ್ತಿನಲ್ಲಿಯೂ ನಮೂದಿಸಲ್ಪಡಬೇಕು, ನಗದಾಗಿಯಾಗಲಿ ಕರೆನ್ಸಿನೋಟ್‌ಗಳ ಮೂಲಕವಾಗಿಯಾಗಲಿ

(50) ರೂಪಾಯಿಗಳ ಡಿಪಾಜಿಟ್ ದರಖಾಸ್ತು ವಜನೆ ಕಳುಹಿಸಲ್ಪಟ್ಟ ಹೊರ್ತು ಯಾವ ದರಖಾಸ್ತೂ ತೆಗದುಕೊಳ್ಳುವದಿಲ್ಲ. ಸಾದೆ ಕಡಿ ಯುವಣ, ಕುಯ್ಯುವಣ, ಸಾಗಿಸೋಣ, ರೈಲ್ವೇ ಸ್ಟೇಷನ್‌ಬಳಿ ಫೇರಿಸೋಣ, ಯಿವುಗಳಿಗೆ ಸಂಬಂಧಪಟ್ಟ ತವಾಂ ಖರ್ಚುಗಳೂ ದರಗಳಲ್ಲಿ ಕೇರಿ ಯಿರತಕ್ಕದ್ದು.

6. ಯಿದರಡೀ ರುಜುವಾಡಿ ಯಿರುವವರಿಂದ ಯಾ ಅವರಿಂದ ನೇಮಿಸಲ್ಪಟ್ಟ ಆಫೀಸರಿಂದ ಅವರ ಆಫೀಸಿನಲ್ಲಿ ಸ್ಯ ಮಜಕೂರ್ ನವಂಬರ್ 15ನೇ ತಾರೀಖು ಮಧ್ಯಾಹ್ನ ಹಾಜರಾಗಲಿಕ್ಕೆ ಯಿಚ್ಛೈಸುವ ದರಖಾಸ್ತುದಾರ ರೂಬರೂ ದರಖಾಸ್ತುಗಳು ಖುಲ್ಲಾ ಮಾಡಲ್ಪಡುವವು.

7. ಇದರಡಿ ರುಜುವಾಡಿ ಯಿರತಕ್ಕವರು ಯಾವ ದರಖಾಸ್ತನ್ನಾಗಲಿ ತಿರಸ್ಕರಿಸಲಿಕ್ಕೆ ಯಾವ ಸಬಬನ್ನೂ ತಿಳಿಸದೇಲೇ ಹಾಗೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ತಮ್ಮಲ್ಲಿ ವುಳಿಸಿಕೊಂಡಿರುತ್ತಾರೆ.

8. ಯಾವ ಪೋಟಾಪೋಟಿ ದಾರನ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅಂಥವನ ಡಿಪಾಜಿಟ್ ವೊಬಲಗು ಉಳಿಸಿಕೊಳ್ಳಲ್ಪಟ್ಟು ಅವನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ಸಂಗತಿ ತನಿಗೆ ತಿಳಿಸಿದ ತಾರೀಖು ವೊದಲು ಒಂದು ವಾರದ ಒಳಗಾಗಿ ಕಂಟ್ರಾಕ್ಟು ಮುಚ್ಚಳಿಕೆ ಬರದುಕೊಡಲಿಕ್ಕಾಗಿ ಅಥವಾ ತನ್ನ ಕಂಟ್ರಾಕ್ಟು ಸರಿಯಾಗಿ ನೆರವೇರಿಸುವ ಬಗ್ಯೆ ನಗದಾಗಿ 300 ರೂಪಾಯಿಗಳ ಠೇವಣಿ ಹಾಜರ್ ಮಾಡುವದಕ್ಕಾಗಲಿ ತಪ್ಪಿದರೆ ಅವನ ಡಿಪಾಜಿಟ್ ದಂಡವಾಗಿ ತೆಗದುಕೊಳ್ಳಲ್ಪಡುವದು.

9. ದರಖಾಸ್ತುಗಳ ಮೇಲೆ "ಮೈಸೂರು ಸ್ಟೇಟ್ ರೈಲ್‌ವೇಗೆ ಸಾದೆ ಸರಬರಾಯಿ ದರಖಾಸ್ತುಗಳು" ಯೆಂದು ಮೇಲ್ವಿಳಾಸಬರಿಯತಕ್ಕದ್ದು.

10. ದರಖಾಸ್ತುದಾರ ತನ್ನ ವೊದಲನೇ ಸರಬರಾಯಿಯನ್ನು ಸ್ಯ1884ನೇ ಇಸವಿ ಡಿಸಂಬರ್ 1ನೇ ಮುಕ್ತಮಿನಲ್ಲಿ ಮಾಡತಕ್ಕದ್ದು.

ತಾರೀಖು 14ನೇ ಅಕ್ಟೋಬರ್ 1884.

ಸ್ಯ ಮಜಕೂರು ಜುಲೈ 29ನೇ ರಾತ್ರಿ ತಿಪಟೂರು ತಾಲ್ಲೂಕು ನೊಣವಿನಕೆರೇಯಲ್ಲಿ ಯಿರುವ ಶ್ರೀವೈಷ್ಣವಜಾತಿ ಅವ್ಯಣ್ಣೆವ್ಯ ನವರ ಮನೆಯಲ್ಲಿ ಕನ್ನಾ ಕಳವು ನಡದು ಕಳವಾಗಿ ಹೋದ ಮಾಲುಗಳ ತಪಸೀಲ್ ಪಟ್ಟಿ:—

ತ್ಯಾಗದ ದೊಡ್ಡವೆಶಾರಿಯಲ್ಲಿದ್ದ ಮಾಲುಗಳು.

ಬೆಳ್ಳೀ ಬಾಬತು.

	ರೂ.	ಆ.	ಪೈ.
ಬೆಳ್ಳೀಗಿಂಡಿ 30 ರೂಪಾಯಿ ತೂಕದ್ದು	30	0	0
ಡಿಟೋ ಲೋಟಾ ಪಟ್ಟೀ ಬಂದಿರುವ ಬಾಬತು 30 ರೂಪಾಯಿ ತೂಕ	30	0	0
ಡಿಟೋ ಸಾದಾ ಲೋಟಾ 30 ರೂಪಾಯಿ ತೂಕದ್ದು	30	0	0
ಡಿಟೋ ತಟ್ಟೆ ಚೌಕವಾಗಿತ್ತು ಸಾದಾ ಬಾಬತು ಚೌಕವಾಗಿರಲಿಲ್ಲ ಗುಂಡಾಗಿತ್ತು ನಾಲ್ಕು ಕಾಲುಗಳಿದ್ದವು ಆ ಪೈಕಿ 1 ಮುರದು ಹೋಗಿ 3 ಕಾಲಿನಲ್ಲಿ ಯಿಧೆ	50	0	0
ಬೆಳ್ಳೀ ಬಾದಾಮಿ ತಟ್ಟೆ 50 ರೂಪಾಯಿ ತೂಕ	50	0	0
ಲವಂಗದಾನಿ ತಿರುಚಿನ ಹುವ್ವಿಗೆ ಭಂಗಾರದ ಮುಲಾಮು ಹಾಕಿದೆ ಇದಕ್ಕೆ 3 ಕಾಲು ಹಾಕಿರುತ್ತೆ. ..	50	0	0
ಡಿಟೋ ಬಟ್ಲು 10 ದೇವರ ಆರಾಧನೆಗೆ ವುಪಯೋಗಿಸತಕ್ಕದ್ದು.	24	0	0
ಡಿಟೋ ಸಂಣವಿಗ್ರಹಗಳು 6ಕ್ಕೆ—1ನೇ ರಾಮವಿಗ್ರಹ, 2ನೇ ಸೀತಾ ವಿಗ್ರಹ, 3ನೇ ಲಕ್ಷ್ಮಣ ವಿಗ್ರಹ, 4ನೇ ಭರತ ವಿಗ್ರಹ, 5ನೇ ಶತ್ರುಘ್ನ ವಿಗ್ರಹ, 6ನೇ ಆಂಜನೇಯ ವಿಗ್ರಹ.	12	0	0
ಚಿನ್ನದ ಗಟ್ಟಿಬಳೆ ಜೊತೆ 1ಕ್ಕೆ	200	0	0
ದಂತದ ಸಾವಾನುಗಳು—ರೂ. 15 ಬೊಂಬೆ 2ಕ್ಕೆ ಹೆಂಣು 1 ಗಂಡು 1, ಕೃಷ್ಣವಿಗ್ರಹ ರೂ. 3, ಬೀಸಣಿಗೆ ರೂ. 3	21	0	0

ಬಟ್ಟೆಗಳು.

ರೇಷ್ಮೆ ಅಂಚಿನೆಧೋತ್ರ ಜೊತೆ 4½ಗೆ ಹೊಸವು	67	8	0
ರೇಷ್ಮೆ ಅಂಚಿನ 6 ಮೊಳದ ಪಂಜೆ ವಂಟಿ 1ಕ್ಕೆ	3	0	0
ಕೆಂಪು ಪೀತಾಂಬ್ರದ ಶೀರೆ 1ಕ್ಕೆ ಶರಗು ಮತ್ತು ಅಂಚು ಕೂಡಾ ಕಲಾಬತ್ತು ಬಂದಿದೆ ಗೆರೆಗಳು ಬಂದಿದೆ ..	100	0	0
ಬಿಳೇಹುವ್ವಿನ ರೇಷ್ಮೆ ಶೀರೆ 1ಕ್ಕೆ ಅಂಚು ಕಿರ್ಮಂಜಿ ರೇಷ್ಮೆ ಬಂದಿತ್ತು	50	0	0
ಕೊರ್ನಾಡು ಕೆಂಪು ನುಂಗಿ ಶೀರೆ 1ಕ್ಕೆ	30	0	0
ಕಸೂತಿಕಡ್ಡಿ ಶೀರೆ 1ಕ್ಕೆ	15	0	0

	ರೂ.	ಆ.	ಪೈ.
ಕುಪ್ಪಸದ ಖಣಗಳು 2ಕ್ಕೆ ಪುಠಾಣಿ ಖಣ 1, ಪೊಪ್ಪಳಿ ಖಣ 1 ಜುಮ್ಲ 2ಕ್ಕೆ	4	0	0
ಡಿಟೋ ಬಾಬತು ರುಮಾಲ್ 1ಕ್ಕೆ	16	0	0
ನೋಟ್ ನಾಲ್ವತ್ತು ರೂಪಾಯಿನದು ಪೂರಾ ನಂಬರು ವಗೈರೆ ಗೊತ್ತಿಲ್ಲ ..	40	0	0
ನೋಟ್ ನಾಲ್ವತ್ತು ರೂಪಾಯಿ ಪೂರಾ ನಂಬರ್ ಗೊತ್ತಿಲ್ಲ	40	0	0
ಯಿಪ್ಪತ್ತು ರೂಪಾಯಿ ನೋಟ್‌ಗಳು 2 ನಂಬರ್ ವಗೈರೆ ಗೊತ್ತಿಲ್ಲ	40	0	0

ಇನ್ನೊಂದು ಸಂಣ ಕರೇಮರದ ಸಂದೂಕದಲ್ಲಿದ್ದ ಸಾಮಾನುಗಳು.

ಚಿನ್ನದ ನಗಗಳು.

ವಜ್ರದ ಮೂಗಬಟ್ಟು 1ಕ್ಕೆ	100	0	0
ಚಿನ್ನದ ಕಪಾಣಿ ಸರ 1ಕ್ಕೆ 7 ಯಿಳೆ ಬಾಬತು ಇದಕ್ಕೆ 2 ತರಹಿನ ತಾಳಿ ಕೆಂಪು ಮಿಶ್ರವಾದ ತಾಳಿ ಹುಲಿಉಗುರಿನ ಭಂಗಾರದ ತಾಳಿ ಭಂಗಾರದ ಸಾದಾ ತಾಳಿ 3	150	0	0
ಭಂಗಾರದ ಕಂಠೀಸರ 5 ಯಳೆ ವುಳ್ಳದ್ದು ಅಪರಂಜಿ 1 ಸೇರು ತೂಕ.	400	0	0
ಭಂಗಾರದ ಮಲೆ ಜೊತೆ 1ಕ್ಕೆ ಸರಪಣಿ ಸಮೇತವಾಗಿದೆ	100	0	0
ಚಿನ್ನದ ಗಟ್ಟಿ ತುಂಡುಗಳು 3 ಅಪರಂಜಿ 7 ವರಹಾ ತೂಕ	35	0	0
ಸಾರ್ಸ 3 ಪೂರಾ ಬಾಬತು	36	0	0
ಪರ್ಷ್ಯಾಬಿರಾಘರ ನಿಗ್ರಹಕೆತ್ತಿದ ಬಿಲ್ಲೇಹಾ ದ ಭಂಗಾರದ ವಿಗ್ರಹ.	25	0	0
ಚಿನ್ನದ ವುಂಗುರ 2ಕ್ಕೆ ಇಂಗ್ಲೀಷ್ ಅಕ್ಷರ ಕೆತ್ತಿದೆ.	36	0	0
ಬಾಳಬಂದು ಅಕ್ಷರ ಕೆತ್ತಿದ ಚಿನ್ನದ ಮೊಹರ್ ವುಂಗುರ 1ಕ್ಕೆ	50	0	0
ಬಿಳ್ಳೀಬಿಲ್ಲೀಯಲ್ಲಿ ಬಾಳಬಂದು ಅಕ್ಷರ ಕೆತ್ತಿದ ಬಾಬತು ಚಿನ್ನದ ವುಂಗುರ 1ಕ್ಕೆ	15	0	0
ಹಸರುಕಲ್ಲು ಕೆತ್ತಿದ ವುಂಗುರ 1ಕ್ಕೆ	100	0	0
ವಜ್ರದ ಹತ್ತೊಂಬಿ ಜೊತೆ 1ಕ್ಕೆ	300	0	0
ಕೆಂಪು ಹತ್ತೊಂಬಿ ಜೊತೆ 1ಕ್ಕೆ	60	0	0
ಕೆಂಪು ವಜ್ರ ಸಜ್ಜೆ ಮಿಶ್ರವಾದ ಕುಂದಣದ ಕಟ್ಟಣದ ಪದಕ ಮತ್ತು ಚಿನ್ನದ ಜರಡು ಸಹ ..	350	0	0
ಕೆಂಪು ವಜ್ರ ಮತ್ತು ಮುತ್ತು ಯಿರುವ ಜೇಸರಿ 1ಕ್ಕೆ	250	0	0
ಪರಡೀಗುಂಡು ಜೊತೆ 1ಕ್ಕೆ ಪವಳ 10 ಚಿನ್ನದ ಗುಂಡು 8	200	0	0
ಹುಡುಗರಿಗೆ ಹಣೆಮೇಲೆ ಕಟ್ಟುವ ಕೆಂಪು ಹಾಕಿರತಕ್ಕ ಬೊಟ್ಟುಯಾನೆ ಪದಕ	25	0	0
ಚಿನ್ನದ ಜಡೆಬಿಲ್ಲೆ ಶಾವಂತಿಗೆ ಹುವ್ವಿನ ವೂಟದ ಬಾಬತು	15	0	0
ನಗದು ರೂಪಾಯಿಗಳು	230	0	0
ಚಂದ್ರಮುರು ಕೆಂಪು ಹಾಕಿದ ಬಾಬತು ಜೊತೆ 1ಕ್ಕೆ	120	0	0
ವಂಟಿ ಸಾಲು ಕೆಂಪುಕಲ್ಲಿನ ಚೆಂದ್ರಮುರು ಜೊತೆ 1ಕ್ಕೆ	100	0	0
ಕೆಂಪು ವಜ್ರ ಮುತ್ತು ಹಾಕಿದ ಬಾಬತು ಅರ್ಧಚಂದ್ರ	15	0	0
ಬೆಳ್ಳೀ ಸಾಮಾನು—			
ಬೆಳ್ಳೀ ಪಟ್ಟೆ ಲೋಟ 1ಕ್ಕೆ	18	0	0
ಬೆಳ್ಳೀ ಬಟ್ಲು 1ಕ್ಕೆ	12	0	0

ಇನ್ನೊಂದು ಸಂಣ ಆಫೀಸ್ ತ್ಯಾಗದ ಮರದ ಪೆಟ್ಟಿಗೆಯಲ್ಲಿದ್ದ ವೂಲುಗಳು.

ಬೆಳ್ಳೀ ಸಾಮಾನು.

ವುದ್ದಗಿರಿ ವೂಟದ ಬೆಳ್ಳೀ ಪಂಚಪಾತ್ರೆ	30	0	0
ತಗಡು ಪಂಚಪಾತ್ರೆ ಬೆಳ್ಳೀದು 18 ರೂಪಾಯಿ ತೂಕದ್ದು	18	0	0
ಕವುಲದ ಬಾಬತು ಚಿನ್ನದ ಜಡೆಬಿಲ್ಲೇ 1ಕ್ಕೆ	15	0	0
ನೂಲಂಚಿನ ರವಿಕೆಖಣಗಳು	1	0	0
ರೇಷ್ಮೇ ಅಂಚಿನ ಖಣಗಳು 2	2	0	0
ಜುಮ್ಲಾ	3,710	8	0

ಯಲ್ಲ ಮಾಲುಗಳನ್ನೇ ಆಗಲಿ ಅಥವಾ ಅವುಗಳಲ್ಲಿ ಯಾವದನ್ನೇ ಆಗಲಿ ಪತ್ತೇಮಾಡಿ ಕೊಟ್ಟವರಿಗೆ ಪತ್ತೇಆದ ಮೂಲಿನ ಕಿಮ್ಮತ್ತಿನಲ್ಲಿ ಶೇಕಡಾ 10 ರೂಪಾಯಿನಂತೆ ಇನಾಂ ಕೊಡುವದಾಗಿ ಮೂಲೀಕರು ಕಬೂಲಿದ್ದಾರೆ.

ಪಿ. ಎಸ್. ಕೃಷ್ಣಮೂರ್ತಿ,
ಡೆಪ್ಯೂಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜ್‌ರಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 383.

ಮೃತಪಟ್ಟ ವೆಂಕಟರಾಜೇಅರಸಿನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರ ನಂಜಪ್ಪ; ದೇವರಾಜಯ್ಯ, ಮೃತಪಟ್ಟ ಸದರೀ ವೆಂಕಟರಾಜೇಅರಸಿನವರಿಗೆ ತಮ್ಮ, ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ನಂಜಪ್ಪ, ದೇವರಾಜಯ್ಯ ಸಹ ಸದರೀ ವಾಸಸ್ಥರಾಗಿ ಮೃತಪಟ್ಟ ವೆಂಕಟರಾಜೇಅರಸಿನವರ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ನಂಜಪ್ಪ, ದೇವರಾಜಯ್ಯ, ಇವರುಗಳ ಅರ್ಜಿಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕಟರಾಜೇಅರಸಿನವರ ಆಸ್ತಿಗೆ ಹಕ್ಕುದಾರರಾದ ವಿಸಿಸ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 308.

ಮೃತಪಟ್ಟ ಮರಿಯಂಣ ವುರಫ್ ಪುಟ್ಟಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಲ್ಲಯ್ಯ ಮೈನರ್, ಗಾರ್ಡಿಯರ್ ಮತ್ತು ಜನಕ ತಂದೆ ಕಂಠೀಲಿಂಗಂಣ, ಮೃತಪಟ್ಟ ಸದರೀ ಮರಿಯಂಣ ವುರಫ್ ಪುಟ್ಟಯ್ಯನಿಗೆ ದತ್ತುಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಸ್ಥಳದ ಸದರೀ ಪುಲ್ಲಯ್ಯ ಮೈನರ್, ಗಾರ್ಡಿಯರ್ ಮತ್ತು ಜನಕ ತಂದೆ ಕಂಠೀಲಿಂಗಂಣನು, ಸದರೀ ವಾಸಸ್ಥನಾಗಿ ಮೃತಪಟ್ಟ ಮರಿಯಂಣ ವುರಫ್ ಪುಟ್ಟಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ 800 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲಯ್ಯ ಮೈನರ್, ಗಾರ್ಡಿಯರ್ ಮತ್ತು ಜನಕ ತಂದೆ ಕಂಠೀಲಿಂಗಂಣನ ಅರ್ಜೀಯನ್ನು 1884ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮರಿಯಂಣ ವುರಫ್ ಪುಟ್ಟಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಸ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅಕ್ಟೋಬರ್ 9ನೇ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ವಿ. ಎಸ್. ನರಸಿಹ್ಮಯ್ಯಂಗಾರ್,
ಡಿಸ್ಟ್ರಿಕ್ಟು ಜಡ್ಜ್.

ಕಡೂರು ಡಿಸ್ಟ್ರಿಕ್ಟು.

ತಾರೀಖು 28ನೇ ಸೆಪ್ಟಂಬರ್ 1884.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಚಿಕ್ಕಮಗಳೂರು ತಾಲ್ಲೂಕು ಮುಗಳವಳ್ಳಿ ಗ್ರಾಮದಲ್ಲಿರುವ ಮೂಲಿಮನೆ ನಂಜಪ್ಪಶಟ್ಟಿ ಮನೆಗೆ ಮಾಹೆ ಮಜಕೂರ್ ತಾರೀಖು 19ನೇ ರಾತ್ರಿ ಕನ್ನಹಾಕಿ ಷುಮಾರು 2,044—8—0 ಮಾಲು ಕಳ್ಳವು ಮಾಡಿಕೊಂಡು ಹೋದ ಕಳ್ಳರ ದಸ್ತಗಿರಿ ಬಗ್ಯೆ ತಕ್ಕ ಬಾತ್ಮಿ ತಿಳಿಸತಕ್ಕವರಿಗೆ ಕುಂಪಣಿ 100 ರೂಪಾಯಿ ಇನಾಂ ಕೊಡಲ್ಪಟ್ಟೀತು. ಕಳವು ಆದ ಜಿಂದಗೀ ತಪಸೀಲನ್ನು ಯಿದರಡಿ ನಮೂದಿಸಿಯಿದೆ :—